ಸತ್ಯಕ್ಕೆ ದೂರವಾದ ವಿಷಯಗಳನ್ನು ಅದರಲ್ಲಿ ಹೇಳಿದ್ದಾರೆ. ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳನ್ನು ಫೇರಾವ್ ಮಾಡಿದರು, ಅಷ್ಟರಲ್ಲನ್ನು ಬಿಡಲೇ ಇಲ್ಲವೆಂದು, ಭಾರೀ ಪ್ರಮಾಣದಲ್ಲಿ ಗಲಾಟೆ ನಡೆಯಿತು ಎನ್ನುವ ರೀತಿಯಲ್ಲಿ ಹೇಳಿದ್ದಾರೆ. ಅದು ಸತ್ಯಕ್ಕೆ ದೂರವಾದ ಮಾತು. ಅವರು ಕೇಳಿರತಕ್ಕದ್ದು, ಆಕೌಂಟೆಂಟ್ಸ್ ಪ್ರಮೋಷನ್ ವಿಚಾರ. ನೀವುಗಳು ಒಂದು ಅಗ್ರಿಮೆಂಟ್ ಏನು ಮಾಡಿಕೊಂಡಿದ್ದೀರಿ, ಅದನ್ನು ಪುನಃ ಜಾರಿಯಲ್ಲಿ ಏತಕ್ಕೆ ತರಲಿಲ್ಲವೆಂದು ಕೇಳಿದಾಗ ಅದನ್ನು ದೊಡ್ಡದಾಗಿ ಬೆಳೆಸಿಕೊಂಡು ಹೋಗಿ ಕೈಗಾರಿಕಾ ಸಂಬಂಧವೇ ಇಲ್ಲದ ಹಾಗೆ ಮಾಡಿದ್ದೀರಿ. ಅದರಲ್ಲಿ ಖಾಸಗಿಯವರು ಯಾವ ರೀತಿ ವರ್ತಿಸುತ್ತಾರೋ ಅದೇ ರೀತಿ ಇವರೂ ವರ್ತಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳೂ ಸಹ, ಸೋಷಲಿಸ್ಟ್ ಮಂತ್ರಿಗಳು, ಇದರ ಬಗ್ಗೆ ಕಾಳಜಿ ಇರುವವರು ಇದರ ಯೋಚನೆ ಮಾಡಬೇಕು. ಅದು ಬಿಟ್ಟು ಈ ರೀತಿ ಕಾರ್ಮಿಕರನ್ನು ಸಸ್ಪೆಂಡ್ ಮಾಡುವುದು, ತೆಗೆದು ಹಾಕುವುದು ಇವೆಲ್ಲ ಮಾಡಿದರೆ ರಾಯಚೂರು ಥರ್ಮಲ್ ಸ್ಟೇಷನ್‌ನ ಕೆಲಸ ಕಾರ್ಯಗಳು ನಡೆಯುವುದಾದರೂ ಹೇಗೆ? ಇವರದ್ದು ಮೈನಾರಿಟಿ ಯೂನಿಯನ್ ಎಂದು ಇನ್ನೊಂದು 5 ಸಾವಿರ ಮೆಜಾರಿಟಿ ಇರುವ ಯೂನಿಯನ್ ಇದೆ ಎಂದು ಹೇಳಿದ್ದಾರೆ. ಇವರು ಮೈನಾರಿಟಿಯಾಗಿದ್ದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸ್ಟ್ರೈಕ್ ಮಾಡುವುದಕ್ಕೆ ಹೇಗೆ ಆಗುತ್ತದೆ. ಅಲ್ಲೂ ಸಹ ಸತ್ಯಕ್ಕೆ ದೂರವಾದ ಮಾತನ್ನು ಹೇಳಿದ್ದಾರೆ. ಸ್ಟಾಮಿನಾರ್ಮಲ್‌ಸಿಗೆ ಬಂಪ ಮೇಲೆ ತಾವು ಸುಮ್ಮನೆ ಕೂಡಬೇಡಿ, ಅಲ್ಲಿ ಕಾರ್ಮಿಕರ ಜೊತೆ ಸರಿಯಾದ ಬಾಂಧವ್ಯ ಕಲ್ಪಿಸುವುದಕ್ಕೆ ಮ್ಯಾನೇಜ್‌ಮೆಂಟಿಗೂ ತಾವು ಹೇಳಬೇಕು. ಈಗ ಸಸ್ಪೆಂಡ್ ಮಾಡುವುದಕ್ಕೆ ಕ್ರಮ ತೆಗೆದು ಕೊಂಡದ್ದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ., ಸನ್ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕಂಥ ಕಳಕಳಿಯನ್ನು ನಾನು ಒಪ್ಪುತ್ತೇನೆ. ಅಲ್ಲಿರತಕ್ಕಂಥ ಕಾರ್ಮಿಕರ ಬಗ್ಗೆ ಮ್ಯಾನೇಜ್‌ಮೆಂಟಿನವರು ಯಾವುದೇ ರೀತಿಯಿಂದ, ತಾತ್ಸಾರದಿಂದ ನಡೆದರು ಅಥವಾ ದ್ವೇಷದಿಂದ ವರ್ತಿಸಿದರು ಎಂಬುದನ್ನು ನಾನೂ ಸಹ ಒಪ್ಪುವುದಿಲ್ಲ. ಆದರೆ ನಾನು ಕಳೆದ ಸಾರಿ ಅಲ್ಲಿಗೆ ಹೋದಾಗ ಬಹಳ ಕಡಿಮೆ ಸದಸ್ಯರಿರತಕ್ಕಂಥ ಸದಸ್ಯರೇ ಗಲಾಟೆ ಮಾಡುತ್ತಿದ್ದರು. ನಾನು ಸ್ಥಳಕ್ಕೆ ಹೋದಾಗ ನನಗೂ ಫೇರಾವ್ ಮಾಡಿದರು. ನಾನು ಅವರ ಜೊತೆಗೇ ಕುಳಿತುಕೊಂಡು ಘಾತನಾಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ತಮ್ಮನ್ನು ಕೇಳಿದರಷ್ಟೇ ಹೊರತು ಫೇರಾವ್ ಮಾಡಲಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ನನಗೆ ಫೇರಾವ್ ಮಾಡಿದರೂ ಸಹ ಏನೂ ಬೇಜಾರು ಪಡಲಿಲ್ಲ. ಸಮಸ್ಯೆ ಬಗ್ಗೆ ಸಾಕಷ್ಟು ವಿಚಾರಣೆ ಮಾಡಿ ಚರ್ಚೆ ಮಾಡಿದ್ದೇನೆ. ಯಾವುದೇ ಕಾರಣದಿಂದ ಅವರ ಮೇಲೆ ದ್ವೇಷದಿಂದ ಮಾಡಿದ್ದಾರೆ ಎಂಬುದನ್ನು ನಾನು ಒಪ್ಪುವುದಿಲ್ಲ. ಅವರ ಬೇಡಿಕೆಗಳು ನ್ಯಾಯಪೂರ್ಣವಾಗಿದ್ದರೆ ಮಾಡೋಣ ಎಂದು ಅಲ್ಲಿರುವ ಅಧಿಕಾರಿಗಳಿಗೂ ಹೇಳಿದ್ದೇನೆ. ಆದರೆ ಅವರು ಥರ್ಮಲ್ ಪ್ಲಾಂಟ್‌ನಲ್ಲಿ ಕೆಲಸ ಆಗುತ್ತಿರುವುದನ್ನು ಅಡ್ಡಿ ಮಾಡಿ ತಡೆದರೆ ಅದನ್ನು ಸಹಿಸಲು ಸಾಧ್ಯವಿಲ್ಲ. ಅದಕ್ಕೋಸ್ಕರ ನಾನು ಮ್ಯಾನೇಜ್‌ಮೆಂಟಿನವರಿಗೆ ಹೇಳಿದ್ದೇನೆ; ನಾನು 14ನೇ ತಾರೀಖಿನಂದು ಪುನಃ ಹೋಗುತ್ತಿದ್ದೇನೆ. ಈಗಾಗಲೇ ಅಲ್ಲಿ ಶಾಂತಿಯುತವಾದ ವಾತಾವರಣ ಇದೆ. ಅಲ್ಲಿ ಏನಾದರೂ ಕಾರ್ಮಿಕರಿಗೆ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸೋಣ

ಮನವಿಗಳು

SRI M. VEERAPPA MOILY.— I had sent a notice regarding the job racket in Arab countries.

MR. SPEAKER.— How this Government is responsible for that ?

SRI M. VEERAPPA MOILY.— It is purely cheating the poor persons promising them about the jobs in the Gulf countries.

MR. SPEAKER.— How the State Government is responsible for it ?

SRI M. VEERAPPA MOILY.—It is a law and order problem. It is an offence committed under I.P.C. It is a cheating case and the State Government is responsible for it.

ಶ್ರೀ ಎಂ. ವೀರಪ್ಪ ಮೊಯ್ಲಿ.—ನವೆಂಬರ್ 1982ರಲ್ಲಿ ಅರಬ್ ನ್ಯಾಷನಲ್‌ನವರು 'ಸೀಮಾ ಟ್ರಾವೆಲಿಂಗ್ ಏಜೆನ್ಸಿಯಿಂದ ಜನರಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿ ಮೂರು ಸಾವಿರ, ನಾಲ್ಕು ಸಾವಿರ, ಹತ್ತು ಸಾವಿರ ರೂಪಾಯಿಗಳನ್ನು ವಸೂಲು ಮಾಡಿಕೊಂಡು ಮೋಸ ಮಾಡಿದ್ದಾರೆ...

MR. SPEAKER.—Please be specific.

SRI M. VEERAPPA MOILY.— It is an offence committed under Section 420 of the I.P.C. namely, cheating.

ಕಳೆದ ಆದಿತ್ಯವಾರದ ದಿವಸ ಸುಮಾರು ಇನ್ನೂರು ಜನರನ್ನು ಡೆಲ್ಲಿಗೆ ಕರೆದುಕೊಂಡು ಹೋಗಿ ಅವರು ಅಲ್ಲಿ ಸ್ಟ್ರಾಂಡ್ ಆಗಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದರ ಬಗ್ಗೆ ಪೋಲೀಸಿನವರು ತನಿಖೆ

ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಇನ್ನೂ ಕೂಡ ಇವರು ಸಾರಾಸಗಟಾಗಿ ಜನರಿಗೆ ಮೋಸ ಮಾಡುತ್ತಿದ್ದಾರೆ.. ಮೈಕೊ, ಎನ್.ಜಿ.ಎಫ್., ಕೆ.ಎಸ್.ಆರ್.ಟಿ.ಸಿ.ಗೆ ಸೇರಿದ ಜನರು ಇದ್ದಾರೆ. ಎಲ್ಲರನ್ನೂ ವಂಚನೆ ಮಾಡಿ ಕೆಲಸ ಕೊಡುತ್ತೇವೆ ಎಂದು ಮೋಸ ಮಾಡಿದ್ದಾರೆ. ಕೆಲವರು ತಮ್ಮ ಮಡದಿಯರ ಮಂಗಳ ಸೂತ್ರವನ್ನು ಮಾರಿ ಪಣ ಕೊಟ್ಟಿದ್ದಾರೆ...

MR. SPEAKER.—If there are specific allegations against particular persons.

SRI M. VEERAPPA MOILY.—There are specific allegations.

MR. SPEAKER.—Then the law will take its own course. How does it come under Rule 334?

SRI M. VEERAPPA MOILY.—This is an important issue.

MR. SPEAKER.—I will read the notice.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಾನು ಹೇಳುತ್ತಿರುವುದು ಬೆಂಗಳೂರು ವಿಮಾನ ನಿಲ್ದಾಣದಲ್ಲಿ, ಮತ್ತು ಡೆಲ್ಲಿ ರೈಲ್ವೆ ಸ್ಟೇಶನ್‌ನಲ್ಲಿಯೂ ಕೂಡ ನೂರಾರು ಮಂದಿ ಸ್ಟ್ಯಾಂಡ್ ಆಗಿ ಕುಳಿತುಬಿಟ್ಟಿದ್ದಾರೆ. ಈ ಪ್ರಕರಣದಲ್ಲಿ 'ಸೀಮಾ' ಟ್ರಾವೆಲಿಂಗ್ ಏಜೆನ್ಸಿಯವರು ಇದ್ದಾರೆ.

MR. SPEAKER.—Where is the Agency?

SRI M. VEERAPPA MOILY: It is in Bangalore, by name Seema Travelling Agency.

MR. SEAKER.—The Government cannot take action *suo motto*. I hope the Hon. leader of opposition will agree.

SRI M. VEERAPPA MOILY.—The complaint has been filed with the police, but the police are inative.

ಇದು ಪೋಲೀಸರ ಗಮನಕ್ಕೆ ಬಂದಿದ್ದರೂ ಕೂಡ ಅವರು ಯಾವ ಕ್ರಮವನ್ನೂ ಇನ್ನೂ ತೆಗೆದುಕೊಳ್ಳದೆ ಕಣ್ಣು ಮುಚ್ಚಿಕೊಂಡು ನೋಡುತ್ತಿದ್ದಾರೆ. ಈ ತರಹ ಮೋಸ ಮಾಡುವುದರಿಂದ ಅನೇಕ ಜನರ ಆಸ್ತಿ ಪಾಸ್ತಿ ಹಾಳಾಗಿದೆ. ಇದು ಬಹಳ ಮುಖ್ಯವಾದ ವಿಚಾರ. It is purely an offence of cheating.

MR. SPEAKER.—Who is the man who has cheated and who got cheated? If there are specific complaints then only you can proceed with the notice.

SRI M. VEERAPPA MOILY.—There have been specific complaints before the police. ಹೇಗೆಂದರೆ ಕೆಲಸ ಕೊಡಿಸುತ್ತೇವೆ ಎಂದು ಹೇಳಿ ಸಾವಿರಗಟ್ಟಲೆ ರೂಪಾಯಿಗಳನ್ನು ವಸೂಲು ಮಾಡಿಕೊಂಡು ವಂಚಿಸಿದ್ದಾರೆ. ಈ ರೀತಿ ಮೋಸ ಮಾಡಿದರೆ ಇದು ರಾಜ್ಯ ಸರ್ಕಾರದ ಕಕ್ಷೆಯಲ್ಲಿ ಬರಬೇಕೋ ಅಥವಾ ಕೇಂದ್ರ ಸರ್ಕಾರದ ಕಕ್ಷೆಯಲ್ಲಿ ಬರಬೇಕೋ? It is a clear case of cheating where the State Government has to step in and stop this job-racketing.

MR. SPEAKER.—If you say that the State Government has failed, I can understand.

SRI M. VEERAPPA MOILY.—I have cited specific case. ದಿನಾಂಕ 3-9-83 ರಿಂದ ಜನಗಳನ್ನು ವಂಚಿಸಿ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ಮೋಸ ಮಾಡಿದ್ದಾರೆ. 29-8-83ರಲ್ಲಿ ಇನ್ನೂ ಹಲವಾರು ಜನರನ್ನು ಬೆಂಗಳೂರಿನಿಂದ ಕರೆದುಕೊಂಡು ಹೋಗಿ ಡೆಲ್ಲಿಯ ರೈಲು ನಿಲ್ದಾಣದಲ್ಲಿ ಜನರು ಮುಂದೆ ಹೋಗದೆ ಸ್ಟ್ಯಾಂಡ್ ಆಗಿದ್ದಾರೆ. ಅವರಿಂದ ಹಣ ಕಳಿಸಿಕೊಡಿ ಎಂದು ಹೆತ್ತವರಿಗೆ ಟೆಲಿಗ್ರಾಂ ಬರುತ್ತದೆ. ಅವರು ತುಂಬಾ ಕಷ್ಟದಲ್ಲಿದ್ದಾರೆ. ಅವರ ರಕ್ಷಣೆಯನ್ನು ಯಾರು ಮಾಡಬೇಕು?

ಅಧ್ಯಕ್ಷರು.—ಇದಕ್ಕೆ ಒಂದು ಗ್ಯಾಂಗೇ ಇರಬಹುದು. ಇದನ್ನು ಪುನರ್‌ಪರಿಶೀಲನೆ ಮಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಂಡಿಯನ್ ಎಕ್ಸಪ್ರೆಸ್‌ನಲ್ಲಿ ಸಲೀಂ ಅಲಫಲ್ ಎಂದು ಅವರ ಹೆಸರು ಬಂದಿದೆ. ಇದರ ಬಗ್ಗೆ ತಕ್ಷಣ ಸೂಕ್ತ ಗಮನ ಕೊಡಬೇಕು...

MR. SPEAKER.—I will send this notice to the Government.

SRI P. RAMDEV.—I had sent a. notice.

MR. SPEAKER.—One Member can raise one matter under Rule 334 in one week. That is the restriction imposed unde rules.

ಶ್ರೀ ಪಿ. ರಾಮ್‌ದೇವ್.—ವನಸ್ಪತಿಯಲ್ಲಿ ದನದ ಕೊಬ್ಬನ್ನು ಬೆರೆಸಿ ಮಾರಾಟ ಮಾಡಿದ್ದಾರೆ. ನಾನು ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಈಗಾಗಲೇ ಕೇಂದ್ರ ಸರ್ಕಾರ ಅಂತಹವರನ್ನ್ನೆ ನ್ಯಾಷನಲ್ ಸೆಕ್ಯೂರಿಟಿ ಆ್ಯಕ್ಟ್ ಪ್ರಕಾರ ಬಂಧಿಸಿ ಇದನ್ನು ಸೀಜ್ ಮಾಡಬೇಕೆಂದು ಹೇಳಿದೆ...

MR. SPEAKER.—How does this Government can decide it ?

ಶ್ರೀ ಪಿ. ರಾಮ್‌ದೇವ್.—ವನಸ್ಪತಿಯಲ್ಲಿ ದನದ ಕೊಬ್ಬು ಮಿಶ್ರಣ ಮಾಡಿರುವುದರಿಂದ ರಿಲಿಜಯನ್ಸ್ ಸೆಂಟಿಮೆಂಟ್ಸ್‌ಗೆ ಎಫೆಕ್ಟ್ ಆಗುತ್ತದೆ. ಹೀಗಾಗಿ ವನಸ್ಪತಿಯನ್ನು ಕೊಂಡುಕೊಳ್ಳುವುದಕ್ಕೇ ಜನರು ಸಂಶಯ ಪಡುತ್ತಿದ್ದಾರೆ. ಇದನ್ನು ಮಾರಾಟ ಮಾಡುವ ಜೈನ ಕಂಪನಿಯನ್ನು ಈಗಾಗಲೇ ಸೀಜ್ ಮಾಡಿದ್ದಾರೆ. ಇಲ್ಲಿ ಏನು ಮಾಡಿದ್ದೀರಿ ? ದಯವಿಟ್ಟು ಇದರ ಬಗ್ಗೆ ಹೇಳಿಕೆ ಕೊಡಬೇಕು. ನಾನು ಇದನ್ನು ಫೋನ್ನಲ್ಲಿ ಕೇಳಿದ್ದಕ್ಕೆ ಸೋಮವಾರ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ...

ಅಧ್ಯಕ್ಷರು.—ಇದು ರಾಜ್ಯಕ್ಕೆ ಸೀಮಿತವಾದ ಪ್ರಶ್ನೆ ಅಲ್ಲವೆಂದು ನನ್ನ ಭಾವನೆ...

ಶ್ರೀ ಪಿ. ರಾಮ್‌ದೇವ್.—ಈ ವನಸ್ಪತಿಯನ್ನು ಈ ರಾಜ್ಯದಲ್ಲೂ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಲಕ್ಷಾಂತರ ರೂಪಾಯಿಗಳ ಲಾಭ ಪಡೆಯುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ವನಸ್ಪತಿ ಎಣ್ಣೆಗೆ ದನದ ಕೊಬ್ಬನ್ನು ಬೆರೆಸುತ್ತಿದ್ದು ಅದನ್ನು ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹಿಂದೂ ಸಮಾಜದಲ್ಲಿ ತೀವ್ರ ಪರಿಣಾಮವಾಗುವುದಕ್ಕೆ ಆಸ್ಪದವಾಗುತ್ತದೆ. ವನಸ್ಪತಿ ಎಣ್ಣೆಯನ್ನು ಬಹುಶಃ ನಿಮ್ಮ ಮನೆಯಲ್ಲೂ ಉಪಯೋಗಿಸಬಹುದೆಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.—ನಮಗೆ ಅದರಿಂದ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಪಿ. ರಾಮ್‌ದೇವ್.—ದನದ ಕೊಬ್ಬನ್ನು ಹಾಕಿದರೆ, ದನದ ಕೊಬ್ಬನ್ನು ತಾವು ತಿನ್ನುವುದಿಲ್ಲವೆಂದು ನಾನು ನಂಬಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಪಿ. ಪಿ. ಪೆಗ್ಗೆ.—ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ತೆಂಗಾಲಿ ಗ್ರಾಮದಲ್ಲಿ ಸವರ್ಣೀಯರಿಂದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರಿಗಾದ ಕಿರುಕುಳದ ವಿಚಾರವಾಗಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರ ಕಲ್ಯಾಣ ಸಮಿತಿಯ ಪರವಾಗಿ ಈ ವರದಿಯನ್ನು ಈ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿ ಮಂಡಿಸಲಾಯಿತು.

ಶ್ರೀ ವೈ. ರಾಮಕೃಷ್ಣ.—ವರದಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ನಾನು ರಿಪೋರ್ಟಿನ ಮೆರಿಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—How can you proceed then ? The report is already presented.

ಶ್ರೀ ವೈ. ರಾಮಕೃಷ್ಣ.—ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. 29ನೇ ತಾರೀಖು ಮೀಟಿಂಗನ್ನು ಕರೆದಿದ್ದರು. ಅದನ್ನು ಮುಂದೂಡಿದರು. ಪುನಃ 30ನೇ ತಾರೀಖು ಮೀಟಿಂಗನ್ನು ಕರೆದಿದ್ದಾರೆ. ಆದರೆ ಆ ದಿನ ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗಳ ಬೇಡಿಕೆಯ ಮೇಲೆ ಆದಂತಹ ಚರ್ಚೆಯಲ್ಲಿ ಪ್ರಥಮವಾಗಿ ಭಾಗವಹಿಸಿ ನಾನು ಮಾತನಾಡುತ್ತಾ ಇಡೀ ದಿವಸ ಸಭೆಯಲ್ಲಿ ಇದ್ದೆ. ಆ ಸಂದರ್ಭದಲ್ಲಿ ಸಮಿತಿಯವರು ಸಭೆಯನ್ನು ಕರೆದು ಈ ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಆದ್ದರಿಂದ ಈ ವರದಿಗೆ ನಾನು ಭಾಗಿಯಲ್ಲ.

ಅಧ್ಯಕ್ಷರು.—ಸಮಿತಿಯಲ್ಲೇ ಮೆಜಾರಿಟಿ ಇರಬೇಕು; ಅದಕ್ಕೇ ವರದಿಯನ್ನು ಮಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಆ ವರದಿಯನ್ನು ತಯಾರು ಮಾಡುವುದಕ್ಕೆ ಇರತಕ್ಕಂತಹ ಕಾನೂನನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಈ ಬಗ್ಗೆ ನನ್ನದೊಂದು ವರದಿಯನ್ನು ಸಭೆಯ ಮುಂದೆ ಇಡುವುದಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.—ತಮಗೆ ಗೊತ್ತಿದ್ದ ಹಾಗೆ ಈ ವರದಿಯನ್ನು ಸಭೆಯಲ್ಲಿ ಇಡುವುದಕ್ಕಿಂತ ಮುಂಚೆ, ಸಮಿತಿಯಿಂದ ಪರಿಶೀಲಿಸಲ್ಪಟ್ಟು, ಅಂಗೀಕರಿಸಲ್ಪಟ್ಟಿದೆ ಎಂದು ಅದರಲ್ಲಿ ಹೇಳಿದ್ದಾರೆ.

SRI Y. RAMAKRISHNA.—I am pleading my inability for the absence there.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣರವರು ಹಿಂದೆ ಕಾನೂನು ಮಂತ್ರಿಗಳಾಗಿ ಕೆಲಸ ಮಾಡಿದಂತಹವರು. ಅಧಿವೇಶನದಲ್ಲಿ ಯಾರಾದರೂ ಸದಸ್ಯರು ಬರದಿದ್ದರೆ ಆ ಸಮಯದಲ್ಲಿ ಸದನದಲ್ಲಿ ಆದಂತಹ ತೀರ್ಮಾನಕ್ಕೆ ನಾನು ಭಾಗಿಯಲ್ಲ ಎಂದು ಹೇಳಿದರೆ ಹೇಗೆ ? ಅದು ಅಷ್ಟೊಂದು